# ಇದೆಲ್ಲಾ ಐಪಿಎಲ್ ಮಾಯೆ!



■ ಕೆ. ಓಂಕಾರಮೂರ್ತಿ

ಯಾರೀ ವಲ್ತಾಟಿ?

ಹದಿನೈದು ದಿನಗಳ ಹಿಂದೆ ಪಾಲ್ ವಲ್ತಾಟಿ ಅವರ ತವರೂರಿನ ಒಬ್ಬ ಕ್ರಿಕೆಟ್ ಅಭಿಮಾನಿಗೆ ಈ ಪ್ರಶ್ನೆ ಕೇಳಿದ್ದರೆ ಸ್ಪಷ್ಟ ಉತ್ತರ ಬರುವುದು ಕಷ್ಟವಿತ್ತು. ಅಷ್ಟೇ ಏಕೆ. ಪಕ್ಕದ ಮನೆಯವರಿಗೂ ಸರಿಯಾಗಿ ಗೊತ್ತಿರಲಿಲ್ಲವೇನೊ?! ಗೂಗ್ಲ್ ಸರ್ಚ್‌ನಲ್ಲೂ ಅವರ ಒಂದೇಒಂದು ಫೋಟೊ ಇರಲಿಲ್ಲ.

ಆದರೆ ಜೀವನ ಒಮ್ಮೊಮ್ಮೆ ಅದೆಂತಹ ತಿರುವು ಪಡೆಯುತ್ತದೆ ಅಲ್ಲವೇ? ರಾತ್ರಿ ಕರಗಿ ಬೆಳಕು ಹರಿಯುವಷ್ಟರಲ್ಲಿ ವಲ್ತಾಟಿ ಈಗ ಹೀರೊ. ವಿಶ್ವಕಂಡ ಅಪ್ರತಿಮ ಕ್ರಿಕೆಟಿಗರು 27 ವರ್ಷ ವಯಸ್ಸಿನ ವಲ್ತಾಟಿ ಅವರನ್ನು ಕೊಂಡಾಡುತ್ತಿದ್ದಾರೆ.

'ಈ ಹುಡುಗ ಸದ್ಯದಲ್ಲಿಯೇ ಭಾರತ ತಂಡದಲ್ಲಿ ಆಡುತ್ತಾನೆ' ಎಂದಿದ್ದಾರೆ ಆ್ಯಡಮ್ ಗಿಲ್‌ಕ್ರಿಸ್ಟ್. ವಿಶ್ವಕಪ್ ಗೆದ್ದ ಭಾರತ ತಂಡದ ನಾಯಕ ಎಂ.ಎಸ್ .ದೋನಿ ಕೂಡ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಆಂಧ್ರ ಮೂಲದ ವಲ್ತಾಟಿ ಹೊರಬಂದರೆ ಈಗ ಅಭಿಮಾನಿಗಳು ಮುತ್ತಿಕೊಳ್ಳುತ್ತಾರೆ. ಅವರನ್ನು ಮಾತನಾಡಿಸಲು ಟಿವಿ ಚಾನಲ್‌ಗಳು, ಮಾಧ್ಯಮಗಳು ಪೈಪೋಟಿಗೆ ಬಿದ್ದಿವೆ. ಅವರ ಮೊಬೈಲ್‌ಗೆ ಪುರುಸೊತ್ತೇ ಇಲ್ಲ!

ಅದಕ್ಕೆಲ್ಲಾ ಕಾರಣ ಐಪಿಎಲ್ ಎಂಬ ಮಿಲಿಯನ್ ಡಾಲರ್ ಬೇಬಿ. ಎಲೆ ಮರೆ ಕಾಯಿಯಾಗಿದ್ದ ವಲ್ತಾಟಿಗೆ ತನ್ನ ಪ್ರತಿಭೆ ಪ್ರದರ್ಶಿಸಲು ಒಂದು ವೇದಿಕೆಯಾಗಿದೆ. ಕಿಂಗ್ಸ್ ಇಲೆವೆನ್ ಪಂಜಾಬ್ ಪರ ಆಡುವ ಇವರು ಅಬ್ಬರದ ಶತಕದ ಮೂಲಕ ತಮ್ಮನ್ನು ಕ್ರಿಕೆಟ್ ಜಗತ್ತಿಗೆ ಪರಿಚಯ ಮಾಡಿಕೊಂಡಿದ್ದಾರೆ.

ಚೆನ್ನೈ ಸೂಪರ್ ಕಿಂಗ್ಸ್ ಎದುರಿನ ಪಂದ್ಯದಲ್ಲಿ ಕೇವಲ 63 ಎಸೆತಗಳಲ್ಲಿ ಅಜೇಯ 120 ರನ್ ಗಳಿಸಿದ್ದು ಅವರನ್ನು ಈಗ ಹೀರೊ ಆಗಿಸಿದೆ. ಐಪಿಎಲ್‌ನ ಒಂದು ಪಂದ್ಯದಲ್ಲಿ ಅತಿ ಹೆಚ್ಚು ಬೌಂಡರಿ ಗಳಿಸಿದ ಆಟಗಾರ ಎನಿಸಿದ್ದಾರೆ. ಆ ಪಂದ್ಯದಲ್ಲಿ ಅವರು 19 ಬೌಂಡರಿ ಗಳಿಸಿದರು.

ಅವರ ಆರ್ಭಟ ಆ ಪಂದ್ಯಕ್ಕಷ್ಟೇ ಸೀಮಿತವಾಗಲಿಲ್ಲ. ನಂತರದ ಪಂದ್ಯದಲ್ಲಿ 75, ಮತ್ತೊಂದು ಪಂದ್ಯದಲ್ಲಿ 46 ರನ್ ಗಳಿಸಿ ತಮ್ಮ ಮಿಂಚಿನ ಆಟ ಮುಂದುವರಿಸಿದ್ದಾರೆ. ಕಿಂಗ್ಸ್ ಇಲೆವೆನ್ ತಂಡದ ಒಡತಿ ಪ್ರೀತಿ ಜಿಂಟಾ ಅವರ ಖುಷಿ ದುಪ್ಪಟ್ಟಾಗಿದೆ.




ವಲ್ತಾಟಿ 2002ರಲ್ಲಿ 19 ವರ್ಷ ವಯಸ್ಸಿನೊಳಗಿನವರ ವಿಶ್ವಕಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. ಆ ತಂಡದಲ್ಲಿ ಇರ್ಫಾನ್ ಪಠಾಣ್, ಪಾರ್ಥಿವ್ ಪಟೇಲ್ ಹಾಗೂ ಅಂಬಾಟಿ ರಾಯುಡು ಅವರಂತಹ ಆಟಗಾರರು ಇದ್ದರು. ಆದರೆ ಬಾಂಗ್ಲಾದೇಶ ಎದುರಿನ ಪಂದ್ಯದಲ್ಲಿ ಕಣ್ಣಿಗೆ ಗಾಯವಾದ ಕಾರಣ ವಲ್ತಾಟಿ  ಅವರ ಕ್ರಿಕೆಟ್ ಜೀವನ ಬಹುತೇಕ ಅಂತ್ಯಗೊಂಡಿತ್ತು. ಇರ್ಫಾನ್ ಹಾಗೂ ಪಾರ್ಥಿವ್ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆದರು. ಆದರೆ ಕಣ್ಣಿಗೆ ಗಾಯಮಾಡಿಕೊಂಡಿದ್ದ ವಲ್ತಾಟಿ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಭರವಸೆಯ ದೀಪ ಆರಿ ಹೋಗಿ ಅವರ ಬಾಳಿನಲ್ಲಿ ಕತ್ತಲು ಆವರಿಸಿತ್ತು. ಹಾಗಾಗಿ ವಲ್ತಾಟಿ ನಡೆದು ಬಂದ ಕಷ್ಟದ ಆ ಪುಟ್ಟ ಹಾದಿಯನ್ನು ಒಮ್ಮೆ ಹಿಂತಿರುಗಿ ನೋಡಿದರೆ ಅಲ್ಲಿ ನೋವಿನ ಗುರುತುಗಳು ಸಿಗುತ್ತವೆ. ಆದರೆ ಕ್ರಿಕೆಟ್‌ನಲ್ಲಿಯೇ ಏನನ್ನಾದರೂ ಸಾಧಿಸಬೇಕು ಎಂಬ ಅವರೊಳಗಿನ ಛಲ ಸುಮ್ಮನೇ ಕೂರಲಿಲ್ಲ. ಅದು ಅವರನ್ನು ಬಡಿದೆಬ್ಬಿಸಿತು. ಮುಂಬೈನಲ್ಲಿ ನೆಲೆಸಿರುವ ಇವರು 2006ರಲ್ಲಿ ಬರೋಡ ಎದುರು ಒಂದು ಏಕದಿನ ಪಂದ್ಯ ಆಡಿದ್ದರು. ಆದರೆ ಸಂಬಂಧಪಟ್ಟವರು ಅವರ ಪ್ರತಿಭೆಯನ್ನು ಸರಿಯಾಗಿ ಬಳಸಿಕೊಳ್ಳಲಿಲ್ಲವೋ ಏನೊ? ಮತ್ತೆ ಅವರು ಎಲೆಮರೆ ಕಾಯಿಯಾಗಿಯೇ ಉಳಿದಿದ್ದರು.

ಆದರೆ ಈ ಬಾರಿಯ ಐಪಿಎಲ್‌ನಲ್ಲಿ ಅವರು ಕಿಂಗ್ಸ್ ಇಲೆವೆನ್ ನಾಯಕ ಗಿಲ್‌ಕ್ರಿಸ್ಟ್ ಕಣ್ಣಿಗೆ ಬಿದ್ದರು. ಅಭ್ಯಾಸದ ವೇಳೆ ಬಲವಾಗಿ ಚೆಂಡನ್ನು ಬಾರಿಸುತ್ತಿದ್ದ ವಲ್ತಾಟಿ ಅವರಿಗೆ ಆರಂಭಿಕ ಆಟಗಾರನಾಗಿ ಬಡ್ತಿ ನೀಡಿದರು. ಆ ಯೋಜನೆ ಕ್ಲಿಕ್ ಆಯಿತು ಕೂಡ.

ಇಂತಹ ಅದೆಷ್ಟೊ ಪ್ರತಿಭೆಗಳು ಈ ಭಾರತಾಂಬೆಯ ಮಡಿಲಿನಲ್ಲಿ ಅನಾಮಿಕರಾಗಿ ಮಲಗಿದ್ದಾರೋ ಏನೋ? ವಲ್ತಾಟಿ ಅವರಂತಹ ಆಟಗಾರರನ್ನು ನೋಡುವಾಗ ಇಂತಹ ಪ್ರಶ್ನೆ ಮನದಲ್ಲಿ ಮೂಡದೇ ಇರದು! ■